ಪ್ರತಿಪಾದನೆಯನ್ನು ನಾನು ಮೆಚ್ಚಿಕೊಂಡಿದ್ದೇನೆ. ಕೆಲವು ಸಲ ಅವರಿಗೆ ಅಸ್ಪಷ್ಟವಾಗಿರುವ ಅನಿಸಿಕೆಗಳನ್ನು ಮಾತಿನ ಮೂಲಕ ಸ್ಪಷ್ಟಗೊಳಿಸಿಕೊಳ್ಳುತ್ತ, ತಮ್ಮ ಯಾವುದೋ ನೋವು, ನಿರಾಶೆಯನ್ನು ತೋಡಿಕೊಳ್ಳುತ್ತಿದ್ದಾರೆ ಎನಿಸುತ್ತದೆ. 1971ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ ನಡೆಸಿದ ವಿಚಾರಸಂಕಿರಣದಲ್ಲಿ 'ನವ್ಯ ಕಾವ್ಯದಲ್ಲಿ ಸಾಮಾಜಿಕ ಪ್ರಜ್ಞೆ' ಎಂಬ ವಿಷಯ ಕುರಿತು ಲಂಕೇಶ ಲೇಖನ ಮಂಡಿಸಿದರು. ಅಡಿಗ ಹಾಗೂ ಬೇಂದ್ರೆಯವರ ಕಾವ್ಯದ ಬಗ್ಗೆ ವಿಶ್ಲೇಷಿಸುತ್ತ ಆನುಷಂಗಿಕವಾಗಿ 'ಅಡಿಗರು ಈ ವಾತಾವರಣದಲ್ಲಿ ಸಂಭಾವಿಸುವುದಕ್ಕೂ, ಬೇಂದ್ರೆಯವರು ತಮ್ಮ ವಾತಾವರಣದಲ್ಲಿ ಪರಿಭಾವಿಸುವುದಕ್ಕೂ ಇರುವ ವ್ಯತ್ಯಾಸ ನೋಡಿದರೆ ಇಬ್ಬರಿಗೂ ಇರುವ ವಿಶಿಷ್ಟ ದೌರ್ಬಲ್ಯ ತಿಳಿಯುತ್ತದೆ' ಎಂದರು. ಜೊತೆಗೆ ಅಭಿವ್ಯಕ್ತಿಗೆ ಸಂಬಂಧಿಸಿದಂತೆ ವಾಕ್ ಸ್ವಾತಂತ್ರ್ಯದ ಬಗೆಗೂ ಕೆಲವು ಮಾತುಗಳಿದ್ದವು. ಅವರ ಮಾತು ಮುಗಿದ ಮೇಲೆ ಬೇಂದ್ರೆಯವರು ವೇದಿಕೆಗೆ ಬಂದು ತಮ್ಮ ತೀವ್ರ ಪ್ರತಿಕ್ರಿಯೆಯನ್ನು ತೋರಿಸುತ್ತ 'ಸಾಹಿತ್ಯ ಸೃಷ್ಟಿಸೋನಿಗೆ ವಾಕ್‌ಸ್ವಾತಂತ್ರ್ಯ ಇಲ್ಲ' ಇತ್ಯಾದಿ ಸ್ವಲ್ಪ ಉದ್ವೇಗಗೊಂಡಂತೆ ಮಾತನಾಡಿದರು. ಪರಸ್ಪರ ಮಾತಿನ ಚಕಮಕಿ ನಡೆಯಿತು. ಯಥಾಪ್ರಕಾರ ಬೇಂದ್ರೆಯವರು ತಮ್ಮ ಮಾತನ್ನೇ ನಡೆಸಿದರೂ 'ಅಭಿಪ್ರಾಯಭೇದದ ನಾಟಕ ಇದು' ಎಂದು ತಾನೇ ಹೇಳಿ ಕಾವನ್ನು ತಗ್ಗಿಸಲು ಪ್ರಯತ್ನಿಸಿದರು. ಆ ಸಂದರ್ಭದಲ್ಲಿ ಲಂಕೇಶ್ ವಹಿಸಿದ ತಾಳ್ಮೆ ನನ್ನನ್ನು ಅಚ್ಚರಿಗೊಳಿಸಿತು. ಆಮೇಲೆ ಬರೆದ ಕೆಲವು ಟಿಪ್ಪಣಿಗಳಲ್ಲಿ ಲಂಕೇಶ ಹೀಗೆಂದಿದ್ದರು: "ಅವರ ಅನಿಸಿಕೆಗಳನ್ನು ಅನುಸರಿಸದೆ ನೋಡಿದರೆ – ಬೇಂದ್ರೆ ವೇದಿಕೆಯ ಮೇಲೆ ಚೀರಾಡುತ್ತಿರುವ ಹಳ್ಳಿಗನ ಹಾಗೆ ಕಾಣಿಸುತ್ತಾರೆ... ಬೇಂದ್ರೆಯವರಂಥ ಹಳ್ಳಿಗ, ಗತ್ತಿನ ಗಟ್ಟಿಗ, ಭಾವಗೀತಾತ್ಮಕ ವ್ಯಕ್ತಿ ನಮ್ಮಲ್ಲಿ ಇನ್ನು ಬರುವ ಸಂಭವ ಕಡಿಮೆ".

ಲಂಕೇಶರ ಬಗ್ಗೆ ಕೆಲವರು ವಿಚಿತ್ರ ಭಾವನೆ ಇಟ್ಟುಕೊಂಡಿರುವುದನ್ನು ನಾನು ಕಂಡಿದ್ದೇನೆ. ಅವರ ಭಾಷಣದಲ್ಲಿ ಎಂಥದೊ ವೀರಾವೇಶದ ತತ್‌ಕ್ಷಣ ಪ್ರಚೋದನೆಯನ್ನು ನಿರೀಕ್ಷಿಸಿ ಕೆಲವರು ನಿರಾಶೆಗೊಂಡಿದ್ದನ್ನು ನೋಡಿದ್ದೇನೆ. ಕೆಲವರ್ಷಗಳ ಹಿಂದೆ ರಾಜ್ಯ ಸಾಹಿತ್ಯ ಅಕಾಡೆಮಿ ಧಾರವಾಡದಲ್ಲಿ 'ನಾಳಿನ ಸಾಹಿತ್ಯ ಸ್ವರೂಪ'ದ ಬಗ್ಗೆ ವಿಚಾರಗೋಷ್ಠಿಯನ್ನು ಏರ್ಪಡಿಸಿದಾಗ ಸಾಹಿತ್ಯ ವಿಮರ್ಶೆಯ ಬಗ್ಗೆ ಲಂಕೇಶರ ಭಾಷಣ ಕೇಳಿದ ಹಿರಿಯ ಸಾಹಿತಿಯೊಬ್ಬರು 'ಈ ಹುಡುಗ ವಿಮರ್ಶೆಯ ನೆಪದಲ್ಲಿ ಅವರಿವರನ್ನು ಬೈದು ಮಾತಾಡಬಹುದೆಂದು ತಿಳಿದುಕೊಂಡಿದ್ದೆ. ಆದರೆ ಸಾಹಿತ್ಯದ ಬಗ್ಗೆ ಎಷ್ಟೊಂದು ಕಾಳಜಿಯಿಂದ, ವೈಚಾರಿಕ ನೆಲೆಯಲ್ಲಿ ವಿಷಯವನ್ನು ಪ್ರತಿಪಾದಿಸಿದರು' ಎಂದು ನನ್ನೆದುರು ತಮ್ಮ ಸೋಜಿಗವನ್ನು ವ್ಯಕ್ತಪಡಿಸಿದರು. ಹೀಗೆಯೇ ಇನ್ನೊಂದು ಪ್ರಸಂಗ: ಗೋಕಾಕ ಚಳವಳಿಯ ಸಂದರ್ಭದಲ್ಲಿ ಧಾರವಾಡದ ಸಭೆಯೊಂದರಲ್ಲಿ ಭಾಗವಹಿಸಲು ಲಂಕೇಶರನ್ನು ಕೇಳಿಕೊಳ್ಳಲಾಗಿತ್ತು. ಅವರು ಒಪ್ಪಿಕೊಂಡು ಬಂದು ಭಾಷಣವನ್ನು ಮಾಡಿದರು. ಆ ಕಾವೇರಿದ ಆಂದೋಲನದ ಸಂದರ್ಭದಲ್ಲಿಯೂ ಅವರು ಅತ್ಯಂತ ಸಮಾಧಾನಚಿತ್ತದಿಂದ ಭಾಷೆ, ರಾಜಕಾರಣ ಇತ್ಯಾದಿಗಳನ್ನು ವಿಶ್ಲೇಷಿಸುತ್ತ, ನಡುನಡುವೆ ಗುಂಡೂರಾಯರ ಬಗ್ಗೆ ಲಘುವಾದ ಹಾಸ್ಯದಿಂದ ಟೀಕೆಮಾಡುತ್ತ ಕೇಳುಗರು ಚಿಂತನಪರರಾಗುವಂತೆ ಮಾತನಾಡಿದರು. ಆದರೆ ಅಂದು ನಮ್ಮ ಗುಂಪಿನಲ್ಲಿದ್ದ, ಭಾಷಣ ಕಲೆಯಲ್ಲಿ ತಾವು ಪಾರಂಗತರೆಂದು ತಿಳಿದಿದ್ದ ನಿವೃತ್ತ ಕನ್ನಡ ಪ್ರಾಧ್ಯಾಪಕರೊಬ್ಬರಿಗೆ ಅದು ಹಿಡಿಸಲಿಲ್ಲ. ಅವರು 'ಏನು, ನಿಮ್ಮ ಲಂಕೇಶನ ಭಾಷಣ ಬಹಳ ಸಪ್ಪೆಯಾಯಿತ್ರಾ' ಎಂದರು.

* * *

'ನಮ್ಮ ವಂಶದಲ್ಲಿ ಯಾರೊಬ್ಬರೂ ಬರಹಗಾರ ಇದ್ದಂತಿಲ್ಲ' ಎಂದು ಲಂಕೇಶ ನೆನೆಸಿಕೊಂಡರೂ ಆ ಭಾಗದ ನೆಲ–ಜಲದ ಶಕ್ತಿಯೆಲ್ಲ ಇವರ ಮೂಲಕ ಹೊರಹೊಮ್ಮಿದಂತಿದೆ. ಹದಿಹರಯದ ಬಹುಪಾಲು ಜೀವನ ಹಳ್ಳಿಯಲ್ಲೇ ಕಳೆದದ್ದು ಅವರ ಮುಂದಿನ ಸಾಹಿತ್ಮಿಕ ವ್ಯಕ್ತಿತ್ವಕ್ಕೆ ಒಂದು ವರವಾಗಿಯೇ ಪರಿಣಮಿಸಿರಬೇಕು. ಅವರ ಕೆಲವು ಉತ್ತಮ ಸಣ್ಣಕಥೆಗಳಲ್ಲಿ ಹಾಗೂ 'ಮುಸ್ಸಂಜೆಯ ಕಥಾಪ್ರಸಂಗ'ದಂತಹ ಕಾದಂಬರಿಯಲ್ಲಿ ಜೀವಂತ ಅನುಭವಗಳ ಘರ್ಷಣೆಯಿಂದ ಸೃಷ್ಟಿಸುವುದೆಂದರೆ ಜೀವವನ್ನು ಧಾರೆಯೆರೆಯುವ